ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ದಿನಾಂಕ : DATE : 24/03/2019

## ಕಾಯ್ದೆ ಅನುಮೋದನೆಗೊಂಡು 5 ವರ್ಷ ಬಳಿಕ ನೇಮಕಾತಿ ಪೂರ್ಣ

# ಲೋಕಪಾಲರ ಪದಗ್ರಹಣ

ನವದೆಹಲಿ: ದೇಶದ ಮೊದಲ ಲೋಕಪಾಲರಾಗಿ ನ್ಯಾ. ಪಿನಾಕಿ ಚಂದ್ರ ಘೋಷ್ ಶನಿವಾರ ಪ್ರಮಾಣ ಸ್ವೀಕರಿಸಿದ್ದಾರೆ. ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ ಪ್ರಮಾಣವಚನ ಬೋಧಿಸಿದರು. ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು, ಪ್ರಧಾನಿ ನರೇಂದ್ರ ಮೋದಿ, ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾ. ರಂಜನ್ ಗೊಗೊಯ್ ಪ್ರಮಾಣ ಸ್ವೀಕಾರಕ್ಕೆ ಸಾಕ್ಷಿಯಾದರು. 2017ರ ವರೆಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಪಿ.ಸಿ. ಘೋಷ್ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು.

» **ಲೋಕಪಾಲರಿಗೆ ಸಿಜೆಐಗೆ ಸಮಾನವಾದ ವೇತನ, ಭತ್ಯೆ ಸೌಲಭ್ಯ**

ಲೋಕಪಾಲ ಸಮಿತಿಗೆ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ನ್ಯಾ. ದಿಲೀಪ್ ಭೋಸ್ಲೆ, ನ್ಯಾ. ಪ್ರದೀಪ್ ಕುಮಾರ್ ಮೊಹಂತಿ, ನ್ಯಾ. ಅಭಿಲಾಷಾ ಕುಮಾರಿ ಹಾಗೂ ಛತ್ತೀಸ್‌ಗಢ ಹೈಕೋರ್ಟ್ ಮುಖ್ಯ ನ್ಯಾ. ಅಜಯ್ ಕುಮಾರ್ ತ್ರಿಪಾಠಿ ನ್ಯಾಯಾಂಗ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಸಶಸ್ತ್ರ ಸೀಮಾಬಲದ (ಎಸ್‌ಎಸ್‌ಬಿ) ಮೊದಲ ಮಹಿಳಾ ಮುಖ್ಯಸ್ಥೆ ಎಂಬ ಹೆಗ್ಗಳಿಕೆಯ ಅರ್ಚನಾ ರಾಮಸುಂದರಮ್, ಮಹಾರಾಷ್ಟ್ರದ ಮಾಜಿ ಮುಖ್ಯ ಕಾರ್ಯದರ್ಶಿ ದಿನೇಶ್ ಕುಮಾರ್ ಜೈನ್, ಮಾಜಿ ಐಆರ್ ಎಸ್ ಅಧಿಕಾರಿ ಮಹೇಂದ್ರ ಸಿಂಗ್ ಹಾಗೂ ಗುಜರಾತ್ ಕೇಡರ್‌ನ ಮಾಜಿ ಐಎಎಸ್ ಅಧಿಕಾರಿ ಇಂದ್ರಜೀತ್ ಪ್ರಸಾದ್ ಗೌತಮ್‌ರನ್ನು ಲೋಕಪಾಲ ಸಮಿತಿಗೆ ನ್ಯಾಯಾಂಗೇತರ ಸದಸ್ಯರನ್ನಾಗಿ ನೇಮಿಸಲಾಗಿದೆ.

**ಸಿಜೆಐಗೆ ಸಮನಾದ ವೇತನ:** ಐದು ವರ್ಷ ಪೂರ್ಣಗೊಳ್ಳುವವರೆಗೆ ಅಥವಾ ತಮ್ಮ 70 ವರ್ಷನೇ ವರ್ಷದ ವರೆಗೆ ಲೋಕಪಾಲ ಸಮಿತಿಯ ಮುಖ್ಯಸ್ಥರು ಮತ್ತು ಸದಸ್ಯರು ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ. ಲೋಕಪಾಲರಿಗೆ ಸಿಜೆಐಗೆ ಸಮಾನವಾದ ವೇತನ ಮತ್ತು ಭತ್ಯೆ ಸೌಲಭ್ಯಗಳನ್ನು ನೀಡಲಾಗುತ್ತದೆ. ಸಮಿತಿಯ ಸದಸ್ಯರಿಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಿಗೆ ನೀಡಲಾಗುವ ವೇತನ ಹಾಗೂ ಭತ್ಯೆಗಳನ್ನು ನೀಡಲಾಗುವುದು.



ರಾಷ್ಟ್ರಪತಿಯಿಂದ ಪ್ರಮಾಣವಚನ ಸ್ವೀಕರಿಸಿದ ನ್ಯಾ. ಪಿ.ಸಿ. ಘೋಷ್

### ಯಾರ್ಯಾರು ವ್ಯಾಪ್ತಿಗಿಲ್ಲ?

- ಪ್ರಧಾನಿ
- ಆಂತರಿಕ ಭದ್ರತಾ ವಿಚಾರಗಳು
- ಅಂತಾರಾಷ್ಟ್ರೀಯ ವ್ಯವಹಾರಗಳು
- ಪರಮಾಣು ಶಕ್ತಿ ಮತ್ತು ಬಾಹ್ಯಾಕಾಶ ಯೋಜನೆಗಳು (ಸಮಿತಿಯಲ್ಲಿನ ಶೇ.66 ಸದಸ್ಯ ಬಲದ ಅಭಿಪ್ರಾಯ ಪ್ರಧಾನಿ ವಿರುದ್ಧ ತನಿಖೆಗೆ ಸಮ್ಮತಿಸಿದರೆ, ಆಗ ಪ್ರಧಾನಿ ವಿರುದ್ಧ ಆರೋಪಗಳ ತನಿಖೆಯನ್ನು ಲೋಕಪಾಲ ನಡೆಸಬಹುದು. ಇದನ್ನು ಬಹಿರಂಗ ಪಡಿಸಬೇಕಿಂದಿಲ್ಲ).

### ಮುಂದೇನು?

**ಲೋಕಪಾಲರು** ವಿವಿಧ ವಿಭಾಗಗಳನ್ನು ರಚಿಸುತ್ತಾರೆ. ತನಿಖೆ, ವಿಚಾರಣೆ ವಿಭಾಗಗಳ ಸ್ಥಾಪನೆ. ತನಿಖಾ ನಿರ್ದೇಶಕರು, ವಿಚಾರಣಾ ಮುಖ್ಯಸ್ಥರು, ಅಧಿಕಾರಿಗಳು ಸೇರಿ ಹಲವು ಸಿಬ್ಬಂದಿ ನೇಮಕ

### ಎಲ್ಲೆಲ್ಲಿ ಲೋಕಾಯುಕ್ತ ನೇಮಕವಾಗಿಲ್ಲ?

- ಜಮ್ಮು- ಕಾಶ್ಮೀರ
- ಮಣಿಪುರ
- ಮೇಘಾಲಯ
- ಮಿಜೋರಾಂ
- ನಾಗಾಲ್ಯಾಂಡ್
- ಪುದುಚೆರಿ
- ತಮಿಳುನಾಡು
- ತೆಲಂಗಾಣ
- ತ್ರಿಪುರಾ
- ಪಶ್ಚಿಮ ಬಂಗಾಳ
- ಅರುಣಾಚಲ ಪ್ರದೇಶ

### ಲೋಕಪಾಲ ಹೆಜ್ಜೆ

- 1963: ಬಜೆಟ್ ಅನುದಾನ ಹಂಚಿಕೆ ಕುರಿತು ಚರ್ಚೆ ವೇಳೆ ಸಂಸತ್ತಿನಲ್ಲಿ ಸಾರ್ವಜನಿಕ ತನಿಖಾಧಿಕಾರಿ ನೇಮಕದ ಬಗ್ಗೆ ಧ್ವನಿ ಕೇಳಿಬಂತು.
- 1966: ಸರ್ಕಾರಿ ಅಧಿಕಾರಿಗಳು, ಸಂಸದರ ವಿರುದ್ಧದ ದೂರುಗಳ ತನಿಖೆ ನಡೆಸಲು ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಎರಡು ಸ್ವತಂತ್ರ ಸಂಸ್ಥೆ ಅಥವಾ ಕೇಂದ್ರ ಸ್ಥಾಪನೆಗೆ ಮೊದಲ ಆಡಳಿತಾತ್ಮಕ ಸುಧಾರಣೆ ಸಮಿತಿಯಿಂದ ಶಿಫಾರಸು.
- 1968: ಸಂಸತ್ತಿನಲ್ಲಿ ಲೋಕಪಾಲ ವಿಧೇಯಕ ಮಂಡನೆ. ಆದರೆ ಅನುಮೋದನೆಗೊಳ್ಳಲಿಲ್ಲ. 2011ರವರೆಗೆ 8 ಬಾರಿ ಲೋಕಪಾಲ ವಿಧೇಯಕ ಮಂಡನೆಯಾಗಿ ಅನುಮೋದನೆ ಪಡೆಯಲು ವಿಫಲ.
- 2002: ಪ್ರಧಾನಿಯನ್ನು ಹೊರತುಪಡಿಸಿ ಉಳಿದ ಎಲ್ಲ ಸರ್ಕಾರಿ ಸೇವೆಯಲ್ಲಿ ಇರುವವರನ್ನು ತನಿಖಾ ವ್ಯಾಪ್ತಿಗೆ ಒಳಪಡುವಂತೆ ಹಾಗೂ ಲೋಕಪಾಲ, ಲೋಕಾಯುಕ್ತರ ನೇಮಕಕ್ಕೆ ನ್ಯಾ. ಎಂ.ಎನ್. ವೆಂಕಟಾಚಲಯ್ಯ ನೇತೃತ್ವದ ಸಮಿತಿಯಿಂದ ಸರ್ಕಾರಕ್ಕೆ ಶಿಫಾರಸು.
- 2005: ಎರಡನೇ ಆಡಳಿತಾತ್ಮಕ ಸುಧಾರಣೆ ಸಮಿತಿ ನೇತೃತ್ವ ವಹಿಸಿದ್ದ ವೀರಪ್ಪ ಮೊಯ್ಲಿ ಅವರಿಂದ ಕೂಡಲೇ ಲೋಕಪಾಲ ಕಚೇರಿ ಸ್ಥಾಪನೆಗೆ ಸೂಚನೆ.
- 2011: ಅಂದಿನ ವಿತ್ತ ಸಚಿವ ಪ್ರಣಬ್ ಮುಖರ್ಜಿ ನೇತೃತ್ವದಲ್ಲಿ ಸಚಿವರ ತಂಡ ರಚನೆ. ಲೋಕಪಾಲ ವಿಧೇಯಕ ಮತ್ತು ಭ್ರಷ್ಟಾಚಾರ ನಿಯಂತ್ರಣ ಕ್ರಮಗಳ ಅಧ್ಯಯನ ಹಾಗೂ ಶಿಫಾರಸಿನ ಹೊಣೆಯನ್ನು ತಂಡಕ್ಕೆ ವಹಿಸಿದ ಸರ್ಕಾರ.
- 2013ರ ಡಿ. 18: ಸಂಸತ್ತಿನಲ್ಲಿ ಲೋಕಪಾಲ ಮಸೂದೆಗೆ ಅನುಮೋದನೆ.
- 2016: ಲೋಕಪಾಲ ಕಾಯ್ದೆ ತಿದ್ದುಪಡಿಗೆ ಲೋಕಸಭೆ ಅನುಮೋದನೆ, ಸ್ಥಾಯಿ ಸಮಿತಿಗೆ ಪರಿಶೀಲನೆ ಹೊಣೆ.
- 2018ರ ಸೆ.27: ಸುಪ್ರೀಂಕೋರ್ಟ್ ಮಧ್ಯಪ್ರವೇಶ ಮೂಲಕ ಲೋಕಪಾಲರ ಆಯ್ಕೆಗೆ ಸಮಿತಿ ರಚನೆ. ನ್ಯಾ. ರಂಜನಾ ಪ್ರಕಾಶ್ ದೇಸಾಯಿ ನೇತೃತ್ವ.



ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ, ಸಿಜೆಐ ಗೊಗೊಯ್ ಕುಶಲೋಪರಿ. ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ನ್ಯಾ. ಘೋಷ್‌ಗೆ ಶುಭಕೋರಿದರು.

### ಪಿ.ಸಿ. ಘೋಷ್ (66 ವರ್ಷ)

- ಜನನ: 1952ರ ಮೇ 28, ಕೋಲ್ಕತ
- ತಂದೆ: ದಿ. ನ್ಯಾ. ಶಂಭು ಚಂದ್ರ ಬೋಸ್, ಕಲ್ಕತ್ತ ಹೈಕೋರ್ಟ್ ಮಾಜಿ ಮುಖ್ಯ ನ್ಯಾಯಮೂರ್ತಿ
- 1997ರಲ್ಲಿ ಕಲ್ಕತ್ತ ಹೈಕೋರ್ಟ್ ನ್ಯಾಯ ಮೂರ್ತಿಯಾಗಿ ನೇಮಕ.
- ಆಂಧ್ರಪ್ರದೇಶ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ.
- 2013 ಮಾ.8 -2017ರ ಮೇ 27ರವರೆಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಸೇವೆ.
- ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಸದಸ್ಯ.

4